# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 642 (666)

**ಸದಸ್ಯರ ಹೆಸರು** : ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)

**ಉತ್ತರಿಸುವ ದಿನಾಂಕ** : 18.08.2025

**ಉತ್ತರಿಸುವವರು** : ಮಾನ್ಯ ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವನ್ಯಜೀವಿ ಸಂಘರ್ಷದ ಸಂತ್ರಸ್ತರ ಮನವಿಗಳನ್ನು ಸ್ವೀಕರಿಸಿ ಸರ್ಕಾರಕ್ಕೆ ಸಲ್ಲಿಸಲು ಸರ್ಕಾರದ ವತಿಯಿಂದ ಯಾವ ಯಾವ ಸೇವಾ ಸಂಸ್ಥೆಗಳನ್ನು ಗುರುತಿಸಲಾಗಿದೆ; ಅವುಗಳ ಕೆಲಸಗಳೇನು: ಸಂತ್ರಸ್ತರ ಮನವಿಯನ್ನು ಸರ್ಕಾರಕ್ಕೆ ಸಲ್ಲಿಸಲು ಮದ್ಯವರ್ತಿಗಳ ಅವಶ್ಯಕತೆ ಇದೆಯೇ: ರಾಜ್ಯದಲ್ಲಿ ಎಷ್ಟು ಸ್ವಯಂಸೇವಾ ಸಂಸ್ಥೆಗಳು ಅರಣ್ಯ ವಾಸಿಗಳ ಹಾಗೂ ಪ್ರಾಣಿಗಳ ಉಳಿವಿಗಾಗಿ ಕೆಲಸ ಮಾಡುತ್ತಿವೆ; (ಹೆಸರಿನೊಂದಿಗೆ ವಿವರ ನೀಡುವುದು) | ವನ್ಯಜೀವಿ ಸಂಘರ್ಷದ ಸಂತ್ರಸ್ತರ ಮನವಿಗಳನ್ನು ಸ್ವೀಕರಿಸಲು ಇಲಾಖೆಯಿಂದ ಯಾವುದೇ ಸೇವಾಸಂಸ್ಥೆಗಳು / ಮಧ್ಯವರ್ತಿಗಳನ್ನು ನಿಯೋಜಿಸಿರುವುದಿಲ್ಲ.<br><br>ಇಲಾಖಾ ವತಿಯಿಂದ ಯಾವುದೇ ಸ್ವಯಂಸೇವಾ ಸಂಸ್ಥೆಗಳನ್ನು ಅರಣ್ಯ ವಾಸಿಗಳ ಹಾಗೂ ವನ್ಯಪ್ರಾಣಿಗಳ ಉಳಿವಿಗಾಗಿ ಕೆಲಸ ಮಾಡಲು ನೇಮಿಸಿರುವುದಿಲ್ಲ. |
| ಆ) | ಸ್ವಯಂ ಸೇವಾ ಸಂಸ್ಥೆಗಳು ಸಂರಕ್ಷಿತ ಅರಣ್ಯದಲ್ಲಿ ಕಾರ್ಯ ಚಟುವಟಿಕೆಗಳನ್ನು ನಡೆಸಲು ಸರ್ಕಾರ ಅನುಮತಿ ನೀಡಿದೆಯೇ: ಇಲ್ಲವಾದಲ್ಲಿ ಅಕ್ರಮವಾಗಿ ಅರಣ್ಯದಲ್ಲಿ ತನ್ನ ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಿರುವ ಸಂಸ್ಥೆಗಳ ಮೇಲೆ ಯಾವ ಕ್ರಮ ಕೈಗೊಳಲಾಗಿದೆ: | ಹುಲಿ ಸಂರಕ್ಷಿತ ಪ್ರದೇಶದಲ್ಲಿ ಅನಗತ್ಯವಾಗಿ ಬೆಳೆದ ಕಳೆಗಳನ್ನು ಸ್ವಂತ ವೆಚ್ಚದಲ್ಲಿ ನಿರ್ಮೂಲನೆ ಮಾಡಲು ಪ್ರಸ್ತುತ ಈ ಕೆಳಕಂಡ ಸಂಸ್ಥೆಗಳಿಗೆ ಇಲಾಖೆಯಿಂದ ಅನುಮತಿಯನ್ನು ನೀಡಲಾಗಿದೆ. |

| ಕ್ರ. ಸಂ | ಸಂಸ್ಥೆಯ ಹೆಸರು | ಪ್ರದೇಶದ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) |
|---|---|---|
| 1. | ಡಬ್ಲ್ಯೂ ಎಮ್ ಜಿ ಫೌಂಡೇಶನ್, ಬೆಂಗಳೂರು | 1000 |
| 2. | ಎಮ್ & ಸಿ ಫೌಂಡೇಶನ್, ಬೆಂಗಳೂರು | 100 |
| 3. | ಐಸಿಐಸಿಐ ಫೌಂಡೇಶನ್, ಬೆಂಗಳೂರು | 125 |
| 4. | ಶೋಲಾ ಟ್ರಸ್ಟ್, ಕೊಯಂಬತ್ತೂರು. | 300 |
| 5. | ವನ್-ಜನ್ ಟ್ರಸ್ಟ್ ಬೆಂಗಳೂರು | 2000 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಅನಗತ್ಯವಾಗಿ ಬೆಳೆದಿರುವ ಲಾಂಟನಾದಂತಹ ಆಕ್ರಮಣಕಾರಿ ಸಸ್ಯಗಳನ್ನು 1000 ಹೆಕ್ಟೇರ್‌ನಲ್ಲಿ ನಿರ್ಮೂಲನೆ ಮಾಡಿ, ಸದರಿ ಲಾಂಟನಾ ಬಯೋಮಾಸ್ ಅನ್ನು ಬಯೋಚಾರ್ ಆಗಿ ಪರಿವರ್ತಿಸುವ ಕುರಿತಾಗಿ ಈಕ್ವಿಲಿಬ್ರಿಯಮ್ ಸಂಸ್ಥೆಯೊಂದಿಗೆ ಒಡಂಬಡಿಕೆ(MoU) ಮಾಡಿಕೊಳ್ಳಲಾಗಿದೆ.<br><br>ಆನೆಗಳ ನಡವಳಿಕೆ ಮತ್ತು ಮಾನವ ಆನೆ ಸಂಘರ್ಷದ ಕುರಿತು ಹಾಸನ- ಕೊಡಗು- ಚಿಕ್ಕಮಗಳೂರು ಭೂಪ್ರದೇಶ ಮಟ್ಟದ ಅಧ್ಯಯನಕ್ಕಾಗಿ WWF, HSI, NCF ಮತ್ತು A Rocha ಎಂಬ 4 ಸಂಸ್ಥೆಗಳೊಂದಿಗೆ ಇಲಾಖೆಯು ಒಡಂಬಡಿಕೆ(MoU) ಮಾಡಿಕೊಳ್ಳಲಾಗಿದೆ.<br><br>ಇಲಾಖೆಯಿಂದ ಅನುಮತಿ ಪಡೆಯದ ಯಾವುದೇ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲು ಅವಕಾಶ ಇರುವುದಿಲ್ಲ. |
| ಇ) | ನಾಗರಹೊಳೆ ಮತ್ತು ಬಂಡೀಪುರ ಹುಲಿ ಸಂರಕ್ಷಿತ ಅರಣ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂಸೇವಾ ಸಂಸ್ಥೆಗಳು ಸೇವೆಯ ಹೆಸರಿನಲ್ಲಿ ಅರಣ್ಯ ಸಂಪತ್ತನ್ನು ಲೂಟಿ ಹೊಡೆಯುವುದಿಲ್ಲ ಅಥವಾ ವನ್ಯಜೀವಿಗಳ ಬೇಟೆ ಮಾಡುತ್ತಿಲ್ಲ ಎಂಬುದಾಗಿ ಸರ್ಕಾರ ರಾಜ್ಯದ ಜನತೆಗೆ ಖಾತರಿ ನೀಡುತ್ತದೆಯೇ; ಇಲ್ಲವಾದಲ್ಲಿ ಅಂತಹ ಸ್ವಯಂ ಸೇವಾ ಸಂಸ್ಥೆಗಳನ್ನು ಮೀಸಲು ಅರಣ್ಯದಲ್ಲಿ ಅನಧಿಕೃತವಾಗಿ ಪ್ರವೇಶ ಮಾಡದಂತೆ ತಡೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ನಾಗರಹೊಳೆ ಮತ್ತು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಅಧ್ಯಯನಕ್ಕಾಗಿ ಹಾಗೂ ಅನಗತ್ಯ ಕಳೆಗಳನ್ನು ಸ್ವಂತ ವೆಚ್ಚದಲ್ಲಿ ನಿರ್ಮೂಲನೆ ಮಾಡಲು ಇಚ್ಛೆಯುಳ್ಳ ಸಂಸ್ಥೆಗಳಿಗೆ ಇಲಾಖೆಯಿಂದ ಕ್ಷೇತ್ರ ಸಿಬ್ಬಂದಿಗಳ ಕಟ್ಟುನಿಟ್ಟಿನ ಮೇಲ್ವಿಚಾರಣೆಯೊಂದಿಗೆ ನಡೆಸಲು ಅನುಮತಿ ನೀಡಲಾಗಿರುತ್ತದೆ. ಅಂತಹ ಸಂಸ್ಥೆ/ ವ್ಯಕ್ತಿ ಹೊರತು ಪಡಿಸಿ ಇತರರಿಗೆ ಹುಲಿ ಸಂರಕ್ಷಿತ ಪ್ರದೇಶಕ್ಕೆ ಪ್ರವೇಶವನ್ನು ನಿರ್ಬಂಧಿಸಲಾಗಿರುತ್ತದೆ. |
| ಈ) | ರಾಜ್ಯದ ಅಭಯಾರಣ್ಯಗಳಲ್ಲಿ ಇತ್ತೀಚಿನ ದಿನಗಳಲ್ಲಿ ಹುಲಿಗಳ ಸಾವಿಗೆ ಯಾರು ಹೊಣೆ; ಕಳೆದ ಎರಡು ವರ್ಷಗಳಲ್ಲಿ ಎಷ್ಟು ಹುಲಿಗಳು ಸಾವನಪ್ಪಿವೆ; ಯಾವ ಕಾರಣದಿಂದ ಮೃತ ಪಟ್ಟಿವೆ? (ವಿವರ ನೀಡುವುದು) | ರಾಜ್ಯದ ಅಭಯಾರಣ್ಯದಲ್ಲಿ ಅಸಹಜವಾಗಿ ಮೃತಪಟ್ಟಿರುವ ಹುಲಿಗಳ ಸಾವಿಗೆ ಕಾರಣಕರ್ತರಾದವರ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರನ್ವಯ ವನ್ಯಜೀವಿ ಅಪರಾಧ ಪ್ರಕರಣವನ್ನು ದಾಖಲಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗುವುದು.<br><br>ರಾಜ್ಯದಲ್ಲಿ ಕಳೆದ 02 ವರ್ಷಗಳಲ್ಲಿ ಸಾವನ್ನಪ್ಪಿರುವ ಹುಲಿಗಳ ಸಂಖ್ಯೆ ಈ ಕೆಳಕಂಡಂತಿದೆ.<br><br>ವರ್ಷ / ಸಹಜ / ಅಸಹಜ<br>2023-24 / 11 / 1<br>2024-25 / 10 / 0<br>2025-26 / 6 / 5<br>ಒಟ್ಟು / 27 / 6<br><br>ವಿವರಗಳನ್ನು ಅನುಬಂಧ-01ರಲ್ಲಿ ಒದಗಿಸಲಾಗಿದೆ. |

| ವರ್ಷ | ಸಹಜ | ಅಸಹಜ |
|---|---|---|
| 2023-24 | 11 | 1 |
| 2024-25 | 10 | 0 |
| 2025-26 | 6 | 5 |
| ಒಟ್ಟು | 27 | 6 |

ಸಂಖ್ಯೆ: ಅಪಜೀ 182 ಎಫ್‌ಡಬ್ಲ್ಯೂಎಲ್ 2025

(ಈಶ್ವರ ಬಿ.ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು